**ಸಾಕ್ಷಿಯನ್ನು ಪುನಃ ದಿಃ 10-01-2018 ರಂದು ಕರೆಸಿ ಪ್ರಮಾಣೀಕರಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ಶ್ರೀ ಎಸ್‌ಬಿ ರವರಿಂದಃ**

1ನೇ ಆರೋಪಿ ನಾನು ಶ್ರೀನಿವಾಸಪುರದಲ್ಲಿ ಆತ ಕೇಳಿದ್ದರಿಂದ ಒಂದು ಮನೆಯನ್ನು 2 ಲಕ್ಷ 75 ಸಾವಿರ ರೂಗಳಿಗೆ ಬೋಗ್ಯಕ್ಕೆ ಹಾಕಿಸಿಕೊಂಡು ಜೊತೆ 2 ಲಕ್ಷ ಹೊಂದಿಸಿ ಮೇ 2013 ರಲ್ಲಿ ಒಟ್ಟು 5 ಲಕ್ಷ ರೂಗಳನ್ನು ಕೊಟ್ಟೆ. ಮೊದಲು ಹೇಳಿದ ಪ್ರಕಾರ ನೀವು ನಡೆದುಕೊಂಡಿಲ್ಲ, ಹಣ ಕೊಡಲೇ ಬೇಕು ಎಂದು ಒತ್ತಾಯ ಮಾಡಿದ್ದರಿಂದ ಕೊಟ್ಟೆ. ಮನೆ ಬೋಗ್ಯದ ದಾಖಲಾತಿಯನ್ನು ನಾನು ಪೊಲೀಸರಿಗೆ ಕೊಟ್ಟೆ. ನಿಪಿ 5 ಮತ್ತು 6ರ ಫೋಟೋಗಳಲ್ಲಿ ನಾನು ನನ್ನ ಮಗಳಿಗೆ ಕೊಟ್ಟಿದ್ದ ಒಡವೆಗಳು ಕಾಣುತ್ತಿವೆ, ನಿಪಿ 7 ಮತ್ತು 8ರ ಫೋಟೋಗಳು ಆರೋಪಿಯ ಕಾರಿಗೆ ಸಂಬಂಧಪಟ್ಟಿದ್ದು, ನಿಪಿ 9 ಮತ್ತು 10 ನನ್ನ ಮೊಮ್ಮಗಳ ಫೋಟೋಗಳಾಗಿದ್ದು, ನಿಪಿ 11 ನನ್ನ ಮಗಳ ಫೋಟೋ ಆಗಿರುತ್ತದೆ. ನಾನು ಹೇಳಿಕೆ ಕೊಡುವಾಗ ಪೊಲೀಸರು ಅದನ್ನು ಸಿಡಿ ಮುಖಾಂತರವೂ ದಾಖಲಿಸಿಕೊಂಡರು.

ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸದರಿ ಬೋಗ್ಯದ ಕರಾರು ಪತ್ರದ ಅಸಲನ್ನು ಹಾಜರುಪಡಿಸಿದ್ದು, ಅದನ್ನು ತನಿಖಾಧಿಕಾರಿಯಿಂದ ಪಡೆದುಕೊಂಡು ಹಾಜರುಪಡಿಸುತ್ತಿರುವುದಾಗಿ ಹೇಳಿದ್ದು, ಸಾಕ್ಷಿ ಸದರಿ ದಾಖಲೆಯನ್ನು ಗುರ್ತಿಸಿದ್ದು, ಅದನ್ನು ನಿಪಿ 13 ಎಂದು ವಕೀಲರ



ಆಕ್ಷೇಪಣೆಯೊಂದಿಗೆ ಗುರ್ತಿಸಲಾಯಿತು. ಹೊಸಕೋಟೆಯಲ್ಲಿ ಮನೆಯನ್ನು ಬೋಗ್ಯಕ್ಕೆ ಹಾಕಿಸಿಕೊಟ್ಟಿದ್ದ ದಾಖಲೆ, ಬ್ಯಾಂಕ್ ಸ್ಟೇಟ್‌ಮೆಂಟ್, ಒಡವೆಗಳ ಬಗ್ಗೆ ಎಲ್ಲಾ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದೇನೆ. ಗುಲಾಬಿ ಬಣ್ಣದ ವೇಲ್ ನನ್ನ ಮೊಮ್ಮಗಳಿಗೆ ಸಂಬಂಧಪಟ್ಟಿದ್ದು, ಹಸಿರು ಬಣ್ಣದ ವೇಲ್ ನನ್ನ ಮಗಳಿಗೆ ಸಂಬಂಧಪಟ್ಟಿದ್ದು, ಅವುಗಳನ್ನು ಈಗಾಗಲೇ ಮುಮಾ 1 ಮತ್ತು 2 ಎಂದು ಗುರ್ತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂಹೆಚ್ ವಕೀಲರಿಂದಃ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರಾದ ಎಂಹೆಚ್ ರವರು ತನಗೆ ಎರಡು ದಿನಗಳಿಂದ ಆರೋಗ್ಯದಲ್ಲಿ ತೊಂದರೆ ಇದ್ದುದರಿಂದ ಈ ಪ್ರಕರಣದಲ್ಲಿ ತಯಾರಿ ಮಾಡಲು ಆಗಲಿಲ್ಲ ಎಂದು ಮತ್ತೊಂದು ಕಾಲಾವಕಾಶವನ್ನು ಕೋರಿರುತ್ತಾರೆ. ಆದರೆ ವಿಶೇಷ ಅಭಿಯೋಜಕರು ಈಗಾಗಲೇ 3ನೇ ಬಾರಿ ಸಾಕ್ಷಿ ನ್ಯಾಯಾಲಯಕ್ಕೆ ಬಂದಿರುವುದರಿಂದ ಮತ್ತು ಕಲಂ 309 ಸಿಆರ್‌ಪಿಸಿ ಪ್ರಕಾರ ಸದರಿ ಪ್ರಕರಣದಲ್ಲಿ ಪಾಟೀ ಸವಾಲನ್ನು ಮಾಡಬೇಕಾಗಿದ್ದು, ಸಮಯಾವಕಾಶ ಕೊಡಲು ಬರುವುದಿಲ್ಲ ಎಂದು ಹಾಗೂ ಇದು ನ್ಯಾಯಾಲಯಕ್ಕೆ ಬಿಟ್ಟ ವಿಚಾರ ಎಂದು ಹೇಳಿರುತ್ತಾರೆ. ನನ್ನ ಪ್ರಕಾರ ಆರೋಪಿ ಪರ ವಕೀಲರು ತಮಗೆ ಆರೋಗ್ಯದ ತೊಂದರೆ ಇರುವ ಬಗ್ಗೆ ಹೇಳಿರುವುದರಿಂದ ಮತ್ತು ಈ ಪ್ರಕರಣದಲ್ಲಿ ಪಾಟೀ ಸವಾಲು ಮಾಡಲೇ ಬೇಕಿರುವುದರಿಂದ ಹಾಗೂ ಸಾಕ್ಷಿ ಬೆಂಗಳೂರಿನಿಂದ ಬರುವುದರಿಂದ ತಲಾ 750/- ರೂ ಭತ್ಯೆ ಆದೇಶ ಮಾಡಿ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.